

# ಜಗತ್ತಿನ ಹಿರಿಯಜ್ಜಿ

ಜಪಾನ್ ದೇಶವು ಪುಟ್ಟದ್ದಾಗಿದ್ದರೂ ಇಲ್ಲಿರುವ ದೀರ್ಘಾಯುಷಿಗಳ ಸಂಖ್ಯೆ ದೊಡ್ಡದು. ಗಿನ್ನೆಸ್ ವಿಶ್ವ ದಾಖಲೆಯ ಪ್ರಕಾರ ಪ್ರಪಂಚದಲ್ಲಿ ಬದುಕಿರುವ ಅತ್ಯಂತ ಹಿರಿಯ ಗಂಡಸು ಈ ದೇಶದವರೇ ಆಗಿರುವಂತೆ ಬದುಕಿರುವ ಅತ್ಯಂತ ಹಿರಿಯ ಹೆಂಗಸು ಎಂಬ ಕೀರ್ತಿಗೆ ಭಾಜನರಾಗಿರುವ ಮಿಸಾಓ ಒಕಾವಾ ಸಹ ಜಪಾನ್ ದೇಶದವರೇ.

ಈಕೆ ಹುಟ್ಟಿದ್ದು 1898 ರ ಮಾರ್ಚ್ 5 ರಂದು; ಟೆನ್ಮಾ ಜಿಲ್ಲೆಯ ಒಸಾಕಾ ಎಂಬ ನಗರದಲ್ಲಿ. ಕಿಮೊನೋ (ಜಪಾನಿ ಉಡುಪು) ವ್ಯಾಪಾರಿಯ ಮಗಳಾಗಿ ಜನಿಸಿದ ಮಿಸಾಓ, ತಾನು ಇಷ್ಟು ದೀರ್ಘ ಕಾಲದವರೆಗೆ ಜೀವಿಸುತ್ತೇನೆಂದು ಅಂದುಕೊಂಡಿರಲಿಲ್ಲವಂತೆ. ಈ ಶತಾಯುಷಿಯು 102 ವರ್ಷದಲ್ಲಿದ್ದಾಗ ಕಾಲು ಮುರಿದುದರ ಹೊರತಾಗಿ ಬೇರೆ ಯಾವುದೇ ಆರೋಗ್ಯದ ತೊಂದರೆ ಆಗಿಲ್ಲವಂತೆ. 1919ರಲ್ಲಿ ಯುಕಿವೊ ಎಂಬಾತನ ಜೊತೆ ಮದುವೆಯಾಗಿದ್ದ ಮಿಸಾಓಗೆ ಮೂರು ಮಕ್ಕಳಾಗಿದ್ದು, ಇವರಲ್ಲಿ 90 ವರ್ಷದ ಆಸುಪಾಸಿನ ಒಬ್ಬ ಮಗ ಹಾಗೂ ಒಬ್ಬ ಮಗಳು ಬದುಕಿದ್ದಾರೆ. ಈಕೆಗೆ 4 ಮೊಮ್ಮಕ್ಕಳು ಹಾಗೂ 6 ಮರಿ ಮೊಮ್ಮಕ್ಕಳು ಇದ್ದಾರೆ. ವಿಶ್ವದಲ್ಲೇ ಅತ್ಯಂತ ಹಿರಿಯಳೆಂಬ ಪಟ್ಟ ಹೊತ್ತುಕೊಂಡಿದ್ದ ಜಪಾನ್ ದೇಶದವಳೇ ಆಗಿದ್ದ 115 ವರ್ಷದ ಕೊಟೊ ಓಕುಬೊಳು 12 ಜನವರಿ 2013ರಲ್ಲಿ ತೀರಿಕೊಂಡ ನಂತರ ವಿಶ್ವದಲ್ಲೇ ಅತೀ ಹಿರಿಯಳೆಂಬ ದಾಖಲೆಯ ಹಿರಿಮೆ ಮಿಸಾಓ ಒಕಾವಾಳದ್ದು.

ಇತ್ತೀಚೆಗೆ ಈಕೆಯ ಜನ್ಮದಿನಕ್ಕೂ ಕೆಲವೇ ದಿನಗಳ ಮುಂಚೆ ಗಿನ್ನೆಸ್ ಅಧಿಕಾರಿಗಳು ಈಕೆಯೇ ವಿಶ್ವದಲ್ಲೇ ಅತ್ಯಂತ ಹಿರಿಯಳೆಂಬ ದಾಖಲೆಯನ್ನು ದೃಢಪಡಿಸಿದರು. ಗಿನ್ನೆಸ್ ವಿಶ್ವದಾಖಲೆಯ ಸಂತಸದೊಡನೆ ತನ್ನ 115 ನೇ ಹುಟ್ಟುಹಬ್ಬವನ್ನು, ಒಸಾಕಾದಲ್ಲಿನ ನರ್ಸಿಂಗ್ ಹೋಂನಲ್ಲಿ ಆಚರಿಸಿಕೊಂಡ ಮಿಸಾಓ, ಕೇಕ್ ಕತ್ತರಿಸಿ ತನಗಿಷ್ಟವಾದ ಮಾಂಸದಡಿಗೆ ಊಟ ಮಾಡಿದರಂತೆ.

■ ವಿನಯ್ ಕುಮಾರ್ ಬಿ.ಹೆಚ್.




